Adikarnataka Colony of Mohamadpur, Chintamani Taluk (acquisition of lands.)

Q.—502. **Sri J. NARAYANAPPA** (Chintamani—Scheduled Castes).—

Will the Government be pleased to state :—

(*a*) since how many years the acquisition proceedings are going on for acquiring the lands for the formation of Adikarnataka Colony of Mohamadpur Village, Ambajidurga Hobli in Chintamani Taluk ;

(*b*) whether it has come to the notice of the Government that the poor Harijans are put to unnecessary trouble by the delay in disposal of the papers ;

(*c*) whether they would grant sites to the respective Harijans by the end of the current year by sanctioning the same immediately ?

A.—**Sri T. CHANNIAH** (Minister for Public Health and Local Self-Government).—

(*a*) Since 22nd May 1948 on the application of Adikarnatakas.

(*b*) No.

(*c*) Orders have been issued to select some other suitable land for the purpose and it will be settled as early as possible.

ಶ್ರೀ ಜೆ. ನಾರಾಯಣಪ್ಪ.—22ನೆಯ ಮೇ 1948 ರಿಂದ ರಿಕಾರ್ಡ್ ನಡೆಯುತ್ತಿದೆಯೆಂದು ಹೇಳಲಾಗಿದೆ, ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಆ ಗ್ರಾಮದ ಸರ್ವೇ ನಂಬರು 55 ರ ಜಮೀನನ್ನು ಅಕ್ವೈರ್ ಮಾಡಿ ಕೊಡಬೇಕೆಂದು ಕೇಳಿದರು, ಆದರೆ ಇದಕ್ಕೆ ಕೆಲವು ತೊಂದರೆಗಳಿವೆ. ಆದಕಾರಣ ಇದಕ್ಕೆ ಬದಲು ಅವರ ಕೇರಿಯ ಪಕ್ಕದಲ್ಲಿರುವ 56 ನೆಯ ಸರ್ವೆ ನಂಬರಿನಲ್ಲಿ ಅಕ್ವೈರ್ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಜೆ. ನಾರಾಯಣಪ್ಪ.—ನಾವು ಕೇಳಿ ಕೊಳ್ಳುತ್ತಿರುವ ಜಮೀನೇ ಸರಿಯಾಗಿದೆ. ಅದನ್ನೇ ಕೊಡಿಸಿ ಕೊಡಲು ಅವಕಾಶವಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ acquire ಮಾಡ ತಕ್ಕಂಥ ಜಮೀನು ತಳಾರಿ ಇನಾಮು ಆಗಿದೆ. ಆ ಜಮೀನು ಅಕ್ವೈರು ಮಾಡಿಕೊಂಡ ಪಕ್ಷದಲ್ಲಿ ಅಕ್ಕಪಕ್ಕದಲ್ಲಿ ಸಂಬಂಧಪಟ್ಟ ಗ್ರಾಮ ನಿವಾಸಿಗಳಿಗೆ ಬೇರೆ ಜಮೀನು ಕೊಡುವುದಕ್ಕೆ ಜಮೀನಿಲ್ಲ. ಕೇರಿ ಸಮೀಪದಲ್ಲಿರತಕ್ಕ ಜಮೀನುಗಳನ್ನು acquire ಮಾಡಬೇಕೆಂದು ಈಗ acqusition proceedings ನಡೆಯುತ್ತಿವೆ. ಆದಕ್ಕೋಸ್ಕರ ನಿಧಾನವಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಸ್ಥಳದಲ್ಲಿ ನೋಡಿದೆ. ಅದು ಚೆನ್ನಾಗಿಲ್ಲ. ನಾವು ಕೇಳುವ ಜಾಗ ಬಿಟ್ಟರೆ ಯಾವುದೂ ಅನುಕೂಲವಿಲ್ಲ. ಆದ್ದರಿಂದ ಅದೇ ಜಮೀನನ್ನು ಕೊಡಿಸಿಕೊಡಲು ಏರ್ಪಾಡು ಮಾಡಿ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಇದು ಇನಾಮಿತಿ ಜಮೀನು. ಆ ಜಮೀನನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಾಗಲಲ್ಲ. ಕೇರಿಯ ಪಕ್ಕದಲ್ಲಿರುವ ಜಮೀನನ್ನು ಅಕ್ವೈರು ಮಾಡದೆ ದೂರವಾಗಿರುವ ಸರ್ವೆ ನಂಬರ್ acquire ಮಾಡುವುದು ಸೂಕ್ತವಲ್ಲವೆಂದು ವರದಿಮಾಡಿದ್ದಾರೆ. ಬೇರೆ acquisition proceedings ತೆಗೆದುಕೊಳ್ಳಬೇಕೆಂದು consider ಮಾಡುತ್ತಿದ್ದೇವೆ.

ಶ್ರೀ ಜೆ. ನಾರಾಯಣಪ್ಪ.—ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಜಮೀನು ಬಿಟ್ಟುಕೊಡುವುದಕ್ಕೆ ಯಾರು ಒಪ್ಪುತ್ತಾರೆ ? ಏಳು ವರ್ಷಗಳಿಂದ ಈ ರಿಕಾರ್ಡ್ ನಡೆಸುತ್ತಾ ಬಂದಿದೆ. ಹರಿಜನರಿಗೆ ಜಮೀನು ಕೊಡಲು ಏಳು ವರ್ಷಗಳಾಗಬೇಕಾದರೆ ಅವರಿಗೆ ಜಮೀನು ಯಾವಾಗ ಸಿಕ್ಕುವುದು ?

ಶ್ರೀ ಟಿ. ಚನ್ನಯ್ಯ.—ಇದು ಶ್ರೀಮಂತರ ಜಮೀನಲ್ಲ. ತಳಾರಿಗಳ ಜಮೀನು. Acquire ಮಾಡುವುದಕ್ಕೆ ತೊಂದರೆ ಇದೆ.

ಶ್ರೀ ಜೆ. ನಾರಾಯಣಪ್ಪ.—ತಳಾರಿಗಳಲ್ಲಿಯೂ ಐಶ್ವರ್ಯವಂತರು ಇರುತ್ತಾರೆ. ನೀವು ಜಮೀನು ಕೊಡಿಸಿಕೊಡದಿದ್ದರೆ ಆ ಗ್ರಾಮವನ್ನು ಬಿಟ್ಟು ಹೋಗ ಬೇಕಾಗುತ್ತದೆ. ಅಲ್ಲಿ ಇಪ್ಪತ್ತು ಮನೆಗಳು ಇವೆ. Acquisition ನಿಧಾನವಾದರೂ ಕೂಡ ಅದನ್ನು ಕೊಡಿಸಿಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—55 ನೇ ಸರ್ವೆ ನಂಬರ್ acquire ಮಾಡುವುದಕ್ಕೆ ತೊಂದರೆ ಇದೆ. ಪುನಃ ಪರಿಶೀಲನೆಮಾಡಿ, 55ನೇ ನಂಬರ್ acquire ಮಾಡುವುದಕ್ಕೆ ಸಾಧ್ಯವೇ, 56 ನೇ ನಂಬರ್ acquire ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪುನಃ ಯೋಚಿಸಿ ಮುಂದೆ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—(*b*) ಪ್ರಶ್ನೆಗೆ ಉತ್ತರವಾಗಿ ಕಾಗದ ಪತ್ರಗಳ ಇತ್ಯರ್ಥ ಬೇಗ ಆಗದೆ ಇರುವುದರಿಂದ ಏನೂ ತೊಂದರೆಯಾಗಿಲ್ಲ ಎಂದು ಹೇಳುತ್ತೀರಿ. (*c*) ಪ್ರಶ್ನೆಗೆ ಉತ್ತರವಾಗಿ ಬೇರೆ ಜಮೀನನ್ನು ಆರಿಸಿಕೊಳ್ಳುವುದಕ್ಕೆ ಹುಕುಂ ಮಾಡಿದ್ದೀರಿ. ಅದಕ್ಕೂ ಇದಕ್ಕೂ ಸರಿಹೊಂದುವುದಿಲ್ಲ. ತೊಂದರೆ ಇಲ್ಲದೆ ಇದ್ದರೆ ಬೇರೆ ಜಮೀನು acquire ಮಾಡಿಕೊಳ್ಳಬೇಕಾದ ಅಗತ್ಯವೇನಿದೆ ?

ಶ್ರೀ ಟಿ. ಚನ್ನಯ್ಯ.—55 ನೇ ನಂಬರ್ ಜಮೀನನ್ನು acquire ಮಾಡಿಕೊಂಡರೆ ತಳಾರಿ ಜಮೀನು ಹೋಗುತ್ತದೆ. ತಳಾರಿ ಜಮೀನಿಗೆ ಬದಲಾಗಿ ಬೇರೆ ಜಮೀನು ಕೊಡುವುದಕ್ಕೆ ಸಾಧ್ಯವಿಲ್ಲ. 56 ನೇ ಸರ್ವೆ ನಂಬರ್ acquire ಮಾಡಿಕೊಳ್ಳುವುದಕ್ಕೆ ಯಾವ ತೊಂದರೆಯೂ ಇಲ್ಲ. ಅದನ್ನೇ ಸೆಲೆಕ್ಟ್ ಮಾಡಬೇಕು, acquisition ಮಾಡಬೇಕು ಎಂಬುದಾಗಿ Acquisition ಆಫೀಸರಿಗೆ ಜಾಗ್ರತೆ ಕಳುಹಿಸಿ ಕೊಡುವುದಕ್ಕೆ instruction ಕೊಟ್ಟಿದೆ.

Mr. SPEAKER.—Questions Nos. 357 and 70 will be taken up together.